ವಿಶ್ವಬ್ಯಾಂಕಿನ ನೆರವಿನ ಸಂಚಾರಿ ಕುಷ್ಠರೋಗ ಚಿಕಿತ್ಸಾ ಘಟಕಗಳು

965 - ಶ್ರೀ ಚೌಡ ರೆಡ್ಡಿ (ಚಿಂತಾಮಣಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆರೋಗ್ಯ ಇಲಾಖೆಯು ವಿಶ್ವಬ್ಯಾಂಕ್ ನೆರವಿನ ಸಂಚಾರಿ ಕುಷ್ಠರೋಗ ಚಿಕಿತ್ಸಾ ಘಟಕಗಳನ್ನು ನಡೆಸುತ್ತಿರುವ ಮತ್ತು ದಿನಾಂಕ 31.3.2000ಕ್ಕೆ ಮುಚ್ಚಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಕರ್ನಾಟಕಾದ್ಯಂತ ಇರುವ ಆ ಘಟಕಗಳನ್ನು ಮುಂದುವರಿಸುವ ಪ್ರಸ್ತಾವನೆ ಏನಾದರೂ ಸರ್ಕಾರದಲ್ಲಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಕಳೆದ ಐದು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿದ ನೌಕರರಿಗೆ ಪುನರ್ವ್ಯವಸ್ಥೆ ಮಾಡುವ ಬಗ್ಗೆ ಪ್ರಸ್ತಾಪವಿದೆಯೇ?*

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕೇಂದ್ರ ಸರ್ಕಾರವು ಈ ಸ್ಕೀಮನ್ನು ಇನ್ನೂ 6 ತಿಂಗಳಿಗೆ ಮುಂದುವರಿಸಿದೆ.

ಆ) ಇಡೀ ರಾಜ್ಯಕ್ಕೆ ವಿಸ್ತರಿಸುವ ಯೋಜನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ದೈಹಿಕ ಶಿಕ್ಷಕರ ವೇತನ ತಾರತಮ್ಯದ ಬಗ್ಗೆ

967 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಲಾಗಿದೆಯೇ? (ಪಾಲಿಟೆಕ್ನಿಕ್‌ವಾರು ಮಾಹಿತಿ ಒದಗಿಸಿ)*

ಆ) *ಹಾಗಿದ್ದಲ್ಲಿ ಆ ದೈಹಿಕ ಶಿಕ್ಷಕರು ಎಐಸಿಟಿಇ ಅರ್ಹತೆ ಹೊಂದಿರುವರೆ? ದೈಹಿಕ ಶಿಕ್ಷಕರುಗಳ ಹೆಸರು ಮತ್ತು ಅರ್ಹತೆಗಳ ವಿರಗಳೇನು)*

ಇ) *ದೈಹಿಕ ಶಿಕ್ಷಕರಿಗೆ ಎಐಸಿಟಿಇ ವೇತನ ನೀಡಲಾಗಿದೆಯೇ?*

ಈ) *ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ. ರಾಜ್ಯದಲ್ಲಿನ 38 ಪಾಲಿಟೆಕ್ನಿಕ್‌ಗಳ ಪೈಕಿ ಈ ಕೆಳಕಂಡ 7 ಪಾಲಿಟೆಕ್ನಿಕ್‌ಗಳಲ್ಲಿ ಮಾತ್ರ ದೈಹಿಕ ಶಿಕ್ಷಕರ ಹುದ್ದೆ ಮಂಜೂರಾಗಿದೆ.

1.	ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು	2
2.	ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು	1
3.	ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ	1
4.	ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ	1
5.	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು	1
6.	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ	1
7.	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು	1

ಈ ಪೈಕಿ ಆರು ಹುದ್ದೆಗಳನ್ನು ಇತ್ತೀಚೆಗೆ ಶೇ. 5ರ ಹುದ್ದೆ ಕಡಿತದಲ್ಲಿ ರದ್ದುಗೊಳಿಸಲಾಗಿದೆ.

ಅ) ಎಐಸಿಟಿಇ ಯ ಪರಿಷ್ಕೃತ ವೇತನ ಶ್ರೇಣಿಯ ಶಿಫಾರಸ್ಸುಗಳ ಷರತ್ತು ಹಾಗೂ ನಿಬಂಧನೆಗಳಲ್ಲಿ ಸ್ಪಷ್ಟಪಡಿಸಿರುವುದಿಲ್ಲ.

ಪಾಲಿಟೆಕ್ನಿಕ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರ ಹೆಸರು ಮತ್ತು ವಿದ್ಯಾರ್ಹತೆ ಈ ಕೆಳಕಂಡಂತಿದೆ.

1. ಎ.ಎಂ. ಪಾಟೀಲ್, ಬಿ.ಎ., ಬಿ.ಪಿ.ಇಡಿ,
   ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ.
2. ಬಿ.ಬಿ. ಗಿರಡ್ಡಿ, ಬಿ.ಎ, ಬಿ.ಪಿ.ಇಡಿ,
   ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು.
3. ಎನ್. ಶಿವಪ್ರಸಾದ್ ರೈ, ಬಿ.ಎ., ಬಿ.ಪಿಇಡಿ,
   ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು.
4. ಬಿ.ಕೆ. ಶಿವಣ್ಣ, ಎಂ.ಎ., ಬಿ.ಪಿ.ಇಡಿ,
   ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು.
5. ಬಾಬುಗಾವ್, ಬಿ.ಎ., ಬಿ.ಪಿ.ಇಡಿ,
   ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ
6. ಎಸ್.ವಿ. ಹಾಬಲಿಕಟ್ಟಿ, ಬಿ.ಎ., ಬಿ.ಪಿಇಡಿ,
   ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ.

ಇ) ಇಲ್ಲ.

ಈ) ರಾಜ್ಯ ಸರ್ಕಾರವು ಎಐಸಿಟಿಇ ವೇತನ ಶ್ರೇಣಿಯನ್ನು 01.04.93ರಿಂದ ಪಾಲಿಟೆಕ್ನಿಕ್‌ನ ಉಪನ್ಯಾಸಕರಿಗೆ ಮಾತ್ರ ವಿಸ್ತರಿಸಲಾಗಿದೆ.